ಇ) ಕೆರೆ ಕಾಮಗಾರಿಯೂ ಪೂರ್ಣಗೊಂಡಿರುವುದಿಲ್ಲವಾದ್ದರಿಂದ ಅದನ್ನು ಅಭಿವೃದ್ಧಿಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಇಲ್ಲ.

ಚಿಕ್ಕಬಿದನೂರ ಹತ್ತಿರ ನೀರಾವರಿ ಕೆರೆ.

1375. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕು ಚಿಕ್ಕಬಿದನೂರ ಹತ್ತಿರ ನೀರಾವರಿ ಕೆರೆ ಕಟ್ಟುವ ಸಲುವಾಗಿ ತಯಾರಿಸಿರುವ ಪುನರ್‌ವಿಮರ್ಶಿತ ಅಂದಾಜು ಪಟ್ಟಿಯನ್ನು ಮಾಡಿ ಸರ್ಕಾರಕ್ಕೆ ಒಪ್ಪಿಗೆ ನೀಡುವ ಸಲುವಾಗಿ ಮುಖ್ಯ ಇಂಜಿನಿಯರು ಸರ್ಕಾರಕ್ಕೆ ಎಂದು ಕಳುಹಿಸಲಾಗಿದೆ ;

ಬ) ಈ ನೀರಾವರಿ ಕೆರೆಯಿಂದ ಉಪಯೋಗವಾಗುವ ಜಮೀನೆಷ್ಟು; ಎಷ್ಟು ಗ್ರಾಮಗಳಿಗೆ ಈ ಅನುಕೂಲ ದೊರಕಲಿದೆ ;

ಇ) ಈ ಕೆಲಸವನ್ನು ಆಶ್ವಾಸನೆ ನೀಡಿದ ಪ್ರಕಾರ ಕೆಲಸವನ್ನು ಪ್ರಾರಂಭಿಸಲು ಸರ್ಕಾರದವರು ಯಾವ ಕೈಗೊಂಡಿರುವರು ; ಇನ್ನೂ ಎಷ್ಟು ದಿವಸಗಳಲ್ಲಿ ಈ ಕೆಲಸವನ್ನು ಪ್ರಾರಂಭಿಸಲು ಸರ್ಕಾರವು ಕೈಗೊಂಡ ಕ್ರಮವೇನು ;

ಈ) 1991–92ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಹಣವನ್ನು ಪೂರ್ಣವಾಗಿ ಖರ್ಚು ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ. ಎಸ್.ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) –

ಅ) ಸವದತ್ತಿ ತಾಲ್ಲೂಕು ಚಿಕ್ಕಬಿದನೂರು ಹತ್ತಿರ ಹೊಸಕೆರೆ ನಿರ್ಮಿಸುವ ಅಂದಾಜಿಗೆ ಈ ಹಿಂದೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. ಆದರೆ ಭೂಸ್ವಾಧೀನ ತೊಂದರೆಯ ಕಾರಣ ಕಾಮಗಾರಿ ಪ್ರಾರಂಭಿಸಲು ಸಾಧ್ಯವಾಗದೇ ಇರುವುದರಿಂದ ಬದಲಿ ಸ್ಥಳದಲ್ಲಿ ಕೆರೆ ನಿರ್ಮಿಸಲು ಪುನರ್ ವಿಮರ್ಶಿತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿಯವರು ದಿನಾಂಕ 26.12.91 ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಪುನರ್ ವಿಮರ್ಶಿತ ಅಂದಾಜನ್ನು ಕೆಲವು ನ್ಯೂನತೆಗಳನ್ನು ಸರಿಪಡಿಸಲು ಹಾಗೂ ಅಂದಾಜಿಗೆ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆಯಲು ದಿನಾಂಕ 22.1.92 ರಂದು ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿಯವರಿಗೆ ಹಿಂದಿರುಗಿಸಲಾಗಿದೆ.

ಬ) ಈ ಕೆರೆಯಿಂದ 1186 ಎಕರೆ ಜಮೀನಿಗೆ ಉಪಯೋಗವಾಗುವುದು. ಈ ಯೋಜನೆಯಿಂದ ಚಿಕ್ಕಬುದನೂರು, ಹಿರೇಬುದನೂರು ಮತ್ತು ಕುತ್ರನಹಟ್ಟಿ ಗ್ರಾಮಗಳಿಗೆ ಅನುಕೂಲ ದೊರಕಲಿದೆ.

ಇ) ಅಂದಾಜಿನಲ್ಲಿನ ನ್ಯೂನತೆಗಳನ್ನು ಸರಿಪಡಿಸಿ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದ ನಂತರ ಈ ಯೋಜನೆಗೆ ಆಡಳಿತಾತ್ಮಕ ಒಪ್ಪಿಗೆ ನೀಡುವ ಬಗ್ಗೆ ಪರಿಶೀಲಿಸಲಾಗುವುದು.

ಈ) ಪರಿಶೀಲಿಸಲಾಗುವುದು

ಬಡ್ಡಿ ಕಾತ್ರಳು ನೀರಾವರಿ ಯೋಜನೆ.

1377. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೆಳಗಾವ್ ಜಿಲ್ಲೆಯ ಸೌದತ್ತಿ ತಾಲ್ಲೂಕು ಬಡ್ಡಿ ಕಾತ್ರಾಳ್ ನೀರಾವರಿ ಯೋಜನೆಯು ಯಾವ ಸಾಲಿನ ಆಯವ್ಯಯದಲ್ಲಿ ಸೇರಿದೆ ?